# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 139 |
| ಸದಸ್ಯರ ಹೆಸರು | : | ಶ್ರೀ ಗೋವಿಂದ ರಾಜು<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |
| ಉತ್ತರಿಸುವ ದಿನಾಂಕ | : | 05.03.2025 |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಕಂದಾಯ ಇಲಾಖೆಯಡಿಯಲ್ಲಿ ಬರುವ ನ್ಯಾಯಾಲಯಗಳಲ್ಲಿ ಕಳೆದ 5 ವರ್ಷದಿಂದ ಇಲ್ಲಿಯವರೆಗೂ ಬಾಕಿ ಪ್ರಕರಣ, ಹೆಚ್ಚು ಅವಧಿಗೆ ಬಾಕಿ ಪ್ರಕರಣ ಹಾಗೂ ಆದೇಶಕ್ಕೆ ಬಾಕಿಯಿರುವ ಭೂ ವ್ಯಾಜ್ಯ ಪ್ರಕರಣಗಳ ಸಂಖ್ಯೆಯೆಷ್ಟು ಹಾಗೂ ಬಾಕಿ ಉಳಿಯಲು ಇರುವ ಕಾರಣಗಳೇನು;</td><td>ಕಂದಾಯ ಇಲಾಖೆಯಡಿ ಬರುವ ಜಿಲ್ಲಾಧಿಕಾರಿ, ಉಪ ವಿಭಾಗಾಧಿಕಾರಿ ಮತ್ತು ತಹಶೀಲ್ದಾರ್ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ವಿವರಗಳು ಕೆಳಕಂಡಂತಿವೆ:
<table>
<tr><th>ವಿವರ</th><th>ಪ್ರಕರಣಗಳ ಸಂಖ್ಯೆ</th></tr>
<tr><td>ಕಳೆದ 5 ವರ್ಷದಿಂದ ಇಲ್ಲಿಯವರೆಗೂ ಬಾಕಿ ಇರುವ ಒಟ್ಟು ಪ್ರಕರಣಗಳು</td><td>49288</td></tr>
<tr><td>ಒಂದು ವರ್ಷಕ್ಕೂ ಮೇಲ್ಪಟ್ಟ ಅವಧಿಗೆ ಬಾಕಿ ಇರುವ ಪ್ರಕರಣಗಳು</td><td>26553</td></tr>
<tr><td>ಐದು ವರ್ಷಕ್ಕೂ ಮೇಲ್ಪಟ್ಟ ಪ್ರಕರಣಗಳು</td><td>9721</td></tr>
<tr><td>ಆದೇಶಕ್ಕೆ ಬಾಕಿಯಿರುವ ಪ್ರಕರಣಗಳು</td><td>721</td></tr>
</table>
ಕೆಲವು ಪ್ರಕರಣಗಳು ವಾದಿ/ಪ್ರತಿವಾದಿಗಳು ವಿಚಾರಣೆಗೆ ಹೆಚ್ಚಿನ ಕಾಲಾವಕಾಶ ಕೋರಿರುವ ಕಾರಣ, ವಾದಿ/ಪ್ರತಿವಾದಿಗಳು ಮರಣ ಹೊಂದಿದಾಗ ಅವರ ವಾರಸುದಾರರನ್ನು ಪ್ರಕರಣಕ್ಕೆ ಸೇರ್ಪಡೆ ಮಾಡುವಲ್ಲಿ ವಿಳಂಬವಾಗುವ ಕಾರಣ ಹಾಗೂ ಅಧಿಕಾರಿಗಳು ಸರ್ಕಾರದ ತುರ್ತು ಸಭೆಗಳು, ಕಾರ್ಯಕ್ರಮಗಳು ಮತ್ತು ಚುನಾವಣಾ ಕರ್ತವ್ಯ ನಿರ್ವಹಿಸಬೇಕಾದ ಸಂದರ್ಭಗಳಲ್ಲಿ ಪ್ರಕರಣಗಳ ವಿಲೇವಾರಿಯಲ್ಲಿ ವಿಳಂಬ ಉಂಟಾಗಿ ಬಾಕಿ ಉಳಿಯುತ್ತವೆ.</td></tr>
<tr><td>(ಆ)</td><td>ಭೂ ವ್ಯಾಜ್ಯಗಳನ್ನು ಇಂತಿಷ್ಟು ಕಾಲಮಿತಿಯಡಿಯಲ್ಲಿ ಪೂರ್ಣಗೊಳಿಸಬೇಕೆಂಬ ನೀತಿ ನಿಯಮ ಹಾಗೂ ಮಾನದಂಡವನ್ನು ಸರ್ಕಾರ ರೂಪಿಸಿದೆಯೇ;</td><td>ಹೌದು.<br>ಕಂದಾಯ ನ್ಯಾಯಾಲಯಗಳಲ್ಲಿನ ಪ್ರಕರಣಗಳ ಇತ್ಯರ್ಥಕ್ಕೆ ಸಂಬಂಧಿಸಿದಂತೆ ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 193 ಟಿಆರ್‌ಎಂ 2019, ದಿನಾಂಕ:18.02.2021ರಲ್ಲಿ ಹೊರಡಿಸಿರುವ ಮಾರ್ಗಸೂಚಿಗಳನ್ವಯ ಆಸ್ತಿಯ ಹಕ್ಕಿನ ಹೊರತಾದ ವಿವಾದಿತ ಪ್ರಕರಣಗಳನ್ನು ತಹಶೀಲ್ದಾರ್‌ರವರು ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ 129ರಡಿ ಮೂರು (3) ತಿಂಗಳೊಳಗೆ ಇತ್ಯರ್ಥಪಡಿಸುವಂತೆ ಹಾಗೂ ಸದರಿ ಕಾಯ್ದೆಯ ಕಲಂ 136(2) ಹಾಗೂ 136(3)ರ (ಅಪೀಲು/ಪುನರೀಕ್ಷಣೆ) ಅಡಿಯಲ್ಲಿ ಕ್ರಮವಾಗಿ ಉಪ ವಿಭಾಗಾಧಿಕಾರಿ ಮತ್ತು</td></tr>
</table>

| | | |
|---|---|---|
| | | ಜಿಲ್ಲಾಧಿಕಾರಿಗಳ ನ್ಯಾಯಾಲಯಗಳಲ್ಲಿ ದಾಖಲಾಗುವ ಮೇಲ್ಮನವಿ ಪ್ರಕರಣಗಳನ್ನು ಎದುರುದಾರರಿಗೆ ನೋಟೀಸು ನೀಡಿದ ದಿನದಿಂದ ಆರು (06) ತಿಂಗಳ ಒಳಗಾಗಿ ಇತ್ಯರ್ಥಪಡಿಸುವಂತೆ ಕಾಲಮಿತಿ ನಿಗದಿಪಡಿಸಿದೆ.<br><br>ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 17 ಟಿಆರ್‌ಎಂ 2021, ದಿನಾಂಕ:22.02.2021ರ ಹಾಗೂ ಸುತ್ತೋಲೆ ಸಂಖ್ಯೆ:ಕಂಇ 118 ಟಿಆರ್‌ಎಂ 2023 (ಭಾ-1), ದಿನಾಂಕ:26.08.2024ರಲ್ಲಿ ವಾರದ ಪ್ರತಿ ಮಂಗಳವಾರ, ಗುರುವಾರಗಳ ಜೊತೆಗೆ ಮತ್ತೊಂದು ಸೂಕ್ತ ದಿನವನ್ನು ಸೇರಿಸಿಕೊಂಡು ಒಟ್ಟು 3 ದಿನಗಳು ಕಡ್ಡಾಯವಾಗಿ ಕಂದಾಯ ಅರೆ ನ್ಯಾಯಿಕ ಪ್ರಕರಣಗಳ ವಿಚಾರಣೆ ನಡೆಸಿ, ಪ್ರಕರಣಗಳ ಶೀಘ್ರ ವಿಲೇವಾರಿ ಮಾಡಲು ಹಲವು ಕಟ್ಟುನಿಟ್ಟಿನ ನಿರ್ದೇಶನಗಳನ್ನು ನೀಡಲಾಗಿದೆ. ಹೆಚ್ಚು ಪ್ರಕರಣಗಳು ಬಾಕಿ ಇರುವ ಜಿಲ್ಲೆಗಳಲ್ಲಿನ ಉಪ ವಿಭಾಗಾಧಿಕಾರಿಗಳ ನ್ಯಾಯಾಲಯಗಳಲ್ಲಿ ದಾಖಲಾಗಿರುವ ಮೇಲ್ಮನವಿ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಪಡಿಸುವ ದೃಷ್ಟಿಯಿಂದ ಉಪ ವಿಭಾಗಾಧಿಕಾರಿ ವೃಂದಕ್ಕೆ ಸಮಾನಾಂತರವಾದ ವೃಂದದ ಇತರೆ ಅಧಿಕಾರಿಗಳಿಗೆ ಕಾರ್ಯಹಂಚಿಕೆ ಮಾಡಿ ಸರ್ಕಾರದ ಅಧಿಸೂಚನೆ ಸಂಖ್ಯೆ:ಕಂಇ 188 ಟಿಆರ್‌ಎಂ 2023 ದಿನಾಂಕ:10.01.2024, 25.01.2024, 01.04.2024 ಮತ್ತು 10.09.2024ಗಳಂದು ಹೊರಡಿಸಲಾಗಿದೆ.<br><br>ಪ್ರತಿ ತಿಂಗಳು ಮಾನ್ಯ ಕಂದಾಯ ಸಚಿವರ ಅಧ್ಯಕ್ಷತೆಯಲ್ಲಿ ನಡೆಯುವ ಪ್ರಗತಿ ಪರಿಶೀಲನಾ ಸಭೆಯಲ್ಲಿ ನ್ಯಾಯಾಲಯ ಪ್ರಕರಣಗಳ ವಿಲೇವಾರಿ ಕುರಿತು ಪರಿಶೀಲನೆ ನಡೆಸಿ, ಶೀಘ್ರವಾಗಿ ವಿಲೇವಾರಿ ಮಾಡಲು ಸೂಕ್ತ ನಿರ್ದೇಶನಗಳನ್ನು ನೀಡಲಾಗುತ್ತಿದೆ. |
| (ಇ) | ಕಾಲಮಿತಿಯೊಳಗೆ ವ್ಯಾಜ್ಯವನ್ನು ಇತ್ಯರ್ಥಪಡಿಸದ ಅಧಿಕಾರಿಗಳ ಮೇಲೆ ಸರ್ಕಾರ ಯಾವ ಕ್ರಮಕೈಗೊಂಡಿದೆ; | ಬೆಳಗಾವಿ ವಿಭಾಗದಲ್ಲಿ ಸರ್ಕಾರದ ಪತ್ರ ಸಂಖ್ಯೆ:ಇ-ಕಂಇ 107 ಜಿಆರ್‌ಸಿ 2024, ದಿನಾಂಕ:26.08.2024ರನ್ವಯ 6 ತಿಂಗಳಿಗೂ ಮೇಲ್ಪಟ್ಟು ಇತ್ಯರ್ಥಪಡಿಸದೆ ಬಾಕಿ ಇರುವ 9 ಉಪ ವಿಭಾಗಾಧಿಕಾರಿಗಳಿಗೆ ಪ್ರಾದೇಶಿಕ ಆಯುಕ್ತರುಗಳಿಂದ ಕಾರಣ ಕೇಳುವ ನೋಟಿಸ್‌ಗಳನ್ನು ಜಾರಿ ಮಾಡಲಾಗಿರುತ್ತದೆ. ಸದರಿ ನೋಟಿಸ್‌ಗಳಿಗೆ ಉಪವಿಭಾಗಾಧಿಕಾರಿಗಳು ನೀಡಿರುವ ಉತ್ತರಗಳನ್ನು ಪರಿಶೀಲಿಸಿ ಸರ್ಕಾರದ ಸುತ್ತೋಲೆ/ಮಾರ್ಗಸೂಚಿಗಳನ್ವಯ ಕಡ್ಡಾಯವಾಗಿ ಕಾಲಮಿತಿಯೊಳಗೆ ಪ್ರಕರಣಗಳನ್ನು ಇತ್ಯರ್ಥಪಡಿಸಲು ನಿರ್ದೇಶನ ನೀಡಲಾಗಿದೆ. |

| | | |
|---|---|---|
| (ಈ) | ಬೆಂಗಳೂರು ನಗರ ಜಿಲ್ಲೆಯಲ್ಲಿ 16 ಸಾವಿರಕ್ಕೂ ಹೆಚ್ಚು ಭೂ ವ್ಯಾಜ್ಯ ಪ್ರಕರಣಗಳು ಬಾಕಿಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಶೀಘ್ರವಾಗಿ ಇತ್ಯರ್ಥಪಡಿಸಲು ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ ? | ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 17 ಟಿಆರ್‌ಎಂ 2021, ದಿನಾಂಕ:22.02.2021ರ ಹಾಗೂ ಸುತ್ತೋಲೆ ಸಂಖ್ಯೆ:ಕಂಇ 118 ಟಿಆರ್‌ಎಂ 2023 (ಭಾ-1), ದಿನಾಂಕ:26.08.2024ರಲ್ಲಿ ವಾರದ ಪ್ರತಿ ಮಂಗಳವಾರ, ಗುರುವಾರಗಳ ಜೊತೆಗೆ ಮತ್ತೊಂದು ಸೂಕ್ತ ದಿನವನ್ನು ಸೇರಿಸಿಕೊಂಡು ಒಟ್ಟು 3 ದಿನಗಳು ಕಡ್ಡಾಯವಾಗಿ ಕಂದಾಯ ಅರೆ ನ್ಯಾಯಿಕ ಪ್ರಕರಣಗಳ ವಿಚಾರಣೆ ನಡೆಸಿ, ಪ್ರಕರಣಗಳ ಶೀಘ್ರ ವಿಲೇವಾರಿ ಮಾಡಲು ಹಲವು ಕಟ್ಟುನಿಟ್ಟಿನ ನಿರ್ದೇಶನಗಳನ್ನು ನೀಡಲಾಗಿದೆ.<br><br>ಮುಂದುವರೆದು, ಹೆಚ್ಚು ಪ್ರಕರಣಗಳು ಬಾಕಿ ಇರುವ ಉಪ ವಿಭಾಗಾಧಿಕಾರಿಗಳ ನ್ಯಾಯಾಲಯಗಳಲ್ಲಿ ದಾಖಲಾಗಿರುವ ಮೇಲ್ಮನವಿ ಪ್ರಕರಣಗಳನ್ನು ಉಪ ವಿಭಾಗಾಧಿಕಾರಿ ವೃಂದಕ್ಕೆ ಸಮಾನಾಂತರ ವೃಂದದ ಇತರೆ ಅಧಿಕಾರಿಗಳಿಗೆ ಕಾರ್ಯಹಂಚಿಕೆ ಮಾಡಿ ಸರ್ಕಾರದ ಅಧಿಸೂಚನೆ ಸಂಖ್ಯೆ:ಕಂಇ 188 ಟಿಆರ್‌ಎಂ 2023, ದಿನಾಂಕ:10.01.2024, 25.01.2024, 01.04.2024 ಮತ್ತು 10.09.2024ಗಳಂದು ಹೊರಡಿಸಲಾಗಿದೆ.<br><br>ಕಂದಾಯ ಸಚಿವರ ಅಧ್ಯಕ್ಷತೆಯಲ್ಲಿ ಮಾಹೆವಾರು ಪ್ರಗತಿ ಪರಿಶೀಲನಾ ಸಭೆಗಳನ್ನು ಸಹ ನಡೆಸಲಾಗುತ್ತಿದೆ. |

**ಸಂ: ಕಂಇ 77 ಟಿಆರ್‌ಎಂ 2025 (9602552)**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು